# ಶಾಲೆಯಿಂದ ಹೊರಗೆ ಉಳಿದ ಮಕ್ಕಳು – ಅವರ ಶಿಕ್ಷಣ

ಪ್ರಾಥಮಿಕ ಶಿಕ್ಷಣದ ಬಹು ಪ್ರಮುಖವಾದ ಸವಾಲು – ಶಾಲೆಯಿಂದ ಹೊರಗೆ ಉಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದೇ ಆಗಿದೆ, ಇದರ ನಂತರ ಇದುವರೆಗೆ ಬಹುಕ್ಷೀಣವಾಗಿ ಕೇಳಿಬರುತ್ತಿದ್ದ ಪ್ರಾಥಮಿಕ ಶಿಕ್ಷಣದ ಮತ್ತೊಂದು ಸವಾಲು ಅದರ ಗುಣಮಟ್ಟ, ಈಗೀಗ ಗುಣಮಟ್ಟ ಕುರಿತಂತೆ ಗಟ್ಟಿ ಧ್ವನಿಯಲ್ಲಿ ಸಂಭಾಷಿಸಲಾಗುತ್ತಿದೆ. ಶಿಕ್ಷಣದ ಅಂತಿಮ ಯಶಸ್ಸಿನ ಸೂಚಕ ಗುಣಮಟ್ಟದ ಶಿಕ್ಷಣ ನೀಡುವುದು ಮತ್ತು ಅದನ್ನು ಮೈಗೂಡಿಸಿಕೊಳ್ಳುವುದೇ ಆಗಿದೆ. ಗುಣಮಟ್ಟ ಮೂಲ ಸೆಲೆ ನಿರಂತರ ಹಾಜರಾತಿ. ಹಾಜರಾತಿ ಇಲ್ಲದೆ ಗುಣಮಟ್ಟ ಎಂಬುದು ಕೇವಲ ಮರೀಚಿಕೆ. ಅನಿಮಿಯತ ಹಾಜರಿ ಗುಣಮಟ್ಟವನ್ನು ಒಂದೆಡೆ ಘಾಸಿಗೊಳಿಸಿದರೆ ಶಾಲೆಯಿಂದ ಹೊರಗುಳಿದ ಮಕ್ಕಳು ಕಲಿಕೆ ಗುಣಮಟ್ಟದ ಮೇಲೆ ಬೀರುವ ಋಣಾತ್ಮಕ ಪರಿಣಾಮ ಇನ್ನೂ ಅಪಾರ.

ಪ್ರೌಢ ಶಿಕ್ಷಣದ ಸಾರ್ವತ್ರೀಕರಣಕ್ಕೆ ದೇಶ ಸಜ್ಜಾಗಿದೆ – ಕೆಲವು ಆರಂಭಿಕ ಚಟುವಟಿಕೆಗಳನ್ನು ಈಗಾಗಲೇ ಪ್ರಾರಂಭಿಸಿದೆ ಕೂಡ ಇಂತಹ ಪರ್ವ ಕಾಲದಲ್ಲಿ ಪ್ರಾಥಮಿಕ ಶಿಕ್ಷಣ ಇನ್ನೂ ಅಪೂರ್ಣವಾಗಿಯೇ ಇದೆ. ಹಾಗೆಂದು ನಮ್ಮ ಸಾಧನೆ ಕಳಪೆ ಎಂದೆನಿಸಬೇಕಿಲ್ಲ. ಶಾಲೆಯಿಂದ ಹೊರಗುಳಿದ ಮಕ್ಕಳು ಈಚಿನ ವರ್ಷಗಳಲ್ಲಿ ಶಿಕ್ಷಣದ ತೆಕ್ಕೆಗೆ ಬಂದಿರುವುದನ್ನು ಮುಂದಿನ ಕೋಷ್ಟಕ* ತಿಳಿಸುತ್ತದೆ. ಇದು ಸಾಧನೆಯ ಯಶಸ್ಸಿನ ಸೂಚಕವಾದರು ಇನ್ನೂ ಸಾಧಿಸಬೇಕಾದುದನ್ನು ಜ್ಞಾಪಿಸುತ್ತದೆ. ಶಾಲೆ ತೊರೆಯುವಿಕೆ ನಿರಂತರ. ಇದೊಂದು ವರ್ತುಲ, ಇದರ ನಿಯಂತ್ರಣ ನಮ್ಮ ಮುಂದಿನ ಸವಾಲು.

ಶಾಲೆಯಿಂದ ಹೊರಗೆ ಇರುವವರಲ್ಲಿ 2 ವಿಧ – 1) ಶಾಲೆಗೆ ಸೇರದವರು 2) ಶಾಲೆ ಸೇರಿ ಬಿಟ್ಟವರು. ಇವರು 7 ರಿಂದ 14 (13 +) ವಯೋಮಾನದ ಗುಂಪಿಗೆ ಸೇರಿದವರಾಗಿರುತ್ತಾರೆ. ಶಾಲೆಯಿಂದ ಹೊರಗುಳಿಯಲು ಕಾರಣಗಳು ಹಲವಾರು. ಶಾಲೆಗೆ ಸೇರುವ / ಸೇರದಿರುವವರ ಹಿನ್ನೆಲೆಯಲ್ಲಿ ಈ ಕಾರಣಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು.

ಮೊದಲನೆಯದಾಗಿ ಸರ್ಕಾರ ನಿರ್ಮಿಸಿಕೊಂಡ ನಿಯಮ ಅಥವ ಮಾರ್ಗದರ್ಶಿ ಸೂತ್ರಗಳು ಎಲ್ಲಾ ಜನವಸತಿ ಕೇಂದ್ರಗಳಿಗೆ ಶಾಲೆಗಳನ್ನು ಮಕ್ಕಳ ಸಂಖ್ಯೆ ಕಡಿಮೆ ಇರುವ ಕಾರಣ ಸಾಧ್ಯವಾಗುತ್ತಿಲ್ಲ. ಸರ್ವ ಶಿಕ್ಷಣ ಜಾರಿಯಾದ ನಂತರ ಶಾಲಾ ಸೌಲಭ್ಯವನ್ನು ತುಂಬ ಮುಕ್ತವಾಗಿ ಅಂದರೆ 100 ಜನ ಸಂಖ್ಯೆ ಹೊಂದಿರುವ ಜನವಸತಿ ಪ್ರದೇಶಗಳಿಗೆ ನೀಡಲಾಗುತ್ತಿದೆ. ಇಷ್ಟಾದರೂ ಇನ್ನೂ ಕೆಲವು ಪ್ರದೇಶಗಳಲ್ಲಿ ಅನೇಕ ಅರ್ಹ ಜನವಸತಿಗಳು ಶಾಲಾ ಸೌಲಭ್ಯಗಳಿಂದ ವಂಚಿತವಾಗಿದೆ.

ಶಾಲೆಯಿಂದ ಹೊರಗುಳಿಯಲು ಎರಡನೆಯ ಕಾರಣ ನಮ್ಮ ಶಾಲೆಗಳೇ: ಶಾಲೆಯ ಪರಿಸರ, ಬೋಧಕ, ತರಗತಿಯ ಸಂವಹನ; ತರಗತಿಯಲ್ಲಿ ಮಗುವನ್ನು ನಡೆಸಿಕೊಳ್ಳುವ ಬಗೆ; ಶಾಲಾ ಚಟುವಟಿಕೆಗಳಿಂದ ಮಗುವಿಗೆ ಆಗುವ ಲಾಭದ ಕೊರತೆ ಇತ್ಯಾದಿ– ಇವು ಅಧ್ಯಾಪಕ / ಮತ್ತವರ ಪ್ರತಿವರ್ತನೆಯಲ್ಲಿನ ಹ್ರಾಸತೆಯನ್ನು ಬಿಂಬಿಸುತ್ತದೆ. ಈ ಆಯಾಮವನ್ನು ತಿದ್ದಿಕೊಳ್ಳಬೇಕಾದ ಸಾರ್ವತ್ರಿಕ ಗುಣಮಟ್ಟವನ್ನು ಸಾಧಿಸುವ ಹಿನ್ನೆಲೆಯಲ್ಲಿ ಇದೆ.

ಮೂರನೆಯದು ಮಗುವಿಗೆ ಸಂಬಂಧಿಸಿದ ಕಾರಣಗಳಾಗಿವೆ. ಬಡತನ, ಪೋಷಕರ ನಿರಾಸಕ್ತಿ, ವಲಸೆ, ವಿವಿಧ ಬಗೆಯ ಶೋಷಣೆಗಳು ಮಗುವನ್ನು ಶಿಕ್ಷಣ ವಂಚಿತರನ್ನಾಗಿಸಿವೆ. ಪ್ರಾಥಮಿಕ ಅಗತ್ಯಗಳ ಪೂರೈಕೆಗಾಗಿ ದಿನವಿಡೀ ಕಷ್ಟಪಟ್ಟರೂ ಅದು ಅರಕೆಯಾಗಿಯೇ ಉಳಿದರೆ – ಶಿಕ್ಷಣದಿಂದ ವಂಚಿತರಾಗದೆ ಇನ್ನೇನಾಗಲು ಸಾಧ್ಯ ?

ಈ ಸ್ತರದ ಮಕ್ಕಳು ನಿಜವಾಗಿಯೂ ನಮಗೆ ಸವಾಲಾಗುವ ಮಕ್ಕಳು. ಸರ್ವ ಶಿಕ್ಷಣ ಅಭಿಯಾನ ಅನೇಕ ಕಾರ್ಯತಂತ್ರಗಳನ್ನು ಯೋಜಿಸಿದೆ. ಆದರೆ ದಿನಗಳೆದಂತೆ ಅವೂ ಸಾಲುವುದಿಲ್ಲ ಎಂಬ ಭಾವನೆ ಕ್ಷೇತ್ರ ಮಟ್ಟದ ಉಸ್ತುವಾರಿ ಅಧಿಕಾರಿಗಳಲ್ಲಿದೆ. ಇವುಗಳ ನಿವಾರಣೆಗೆ ಉಸ್ತುವಾರಿದಾರರು ಸೃಜನಶೀಲರಾಗಬೇಕು. ಇಂತಹ ಸೃಜನಶೀಲತೆ ಬರುವುದು ಸಮಸ್ಯೆಯ (ಮಕ್ಕಳು ಶಾಲೆಯಿಂದ ಹೊರಗೆ ಉಳಿಯಲು ಕಾರಣ) ವಿವಿಧ ಮಗ್ಗುಲುಗಳನ್ನು ಅರ್ಥಮಾಡಿಕೊಳ್ಳುವುದು ತನ್ಮೂಲಕ ಸಮಸ್ಯೆಯ ಪರಿಹಾರಕ್ಕೆ ಒಳನೋಟಗಳನ್ನು ಪಡೆಯುವುದರ ಮೂಲಕ. ಇಂತಹ ಸ್ಥಿತಿ ಕ್ಷೇತ್ರ ಮಟ್ಟದ ಅಧಿಕಾರಿಗಳಲ್ಲಿ ಮೈದಳೆದು ಅದನ್ನು ಅನುಷ್ಠಾನಗೊಳಿಸುವ ಶ್ರದ್ಧೆ – ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಯಶಸ್ಸಿಗೆ ಅಗತ್ಯವಾಗಿದೆ.

ಮುಂದಿನ ಅಧ್ಯಾಯಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಮಧ್ಯವರ್ತನೆಯ ಕೆಲವು ಕಾರ್ಯತಂತ್ರಗಳನ್ನು ಕುರಿತು ತಿಳಿಯುವಿರಿ. 2005 ಮತ್ತು ಅದಕ್ಕೂ ಹಿಂದೆ ನೀಡಿದ ಕಾರ್ಯತಂತ್ರಗಳ ಶೀರ್ಷಿಕೆಗಳಲ್ಲಿ ಕೆಲವು ಬದಲಾವಣೆಗಳಾಗಿವೆ. ಅಲ್ಲದೆ ಕೆಲವು ಕಡೆ ಘಟಕವೆಚ್ಚದಲ್ಲಿ ಬದಲಾವಣೆಗಳಾಗಿವೆ. ಇವುಗಳನ್ನು ಮುಂದೆ ವಿವರಿಸಿದೆ. ಈ ಹೊತ್ತಿಗೆಯಲ್ಲಿ ಪ್ರಮುಖವಾಗಿ 04 ಭಾಗಗಳಿವೆ.

- ಶಿಕ್ಷಣ ಖಾತ್ರಿ ಯೋಜನೆ ಮತ್ತು ಪರ್ಯಾಯ ನಾವೀನ್ಯಯುತ ಶಿಕ್ಷಣ (ಪರ್ಯಾಯ ಶಿಕ್ಷಣ)
- ಮಹಾನಗರದ ಪರ್ಯಾಯ ಶಿಕ್ಷಣ ಯೋಜನೆ . (ಪ್ರತ್ಯೇಕವಾಗಿ ವಿವರ ನೀಡಲಾಗುತ್ತದೆ)
- ಪರ್ಯಾಯ ಶಿಕ್ಷಣದಲ್ಲಿ ಸರ್ಕಾರೇತರ ಸಂಘಟನೆಗಳ ಭಾಗವಹಿಸುವಿಕೆ.
- ಸುತ್ತೋಲೆಗಳು
- ಶಿಕ್ಷಣ ಖಾತ್ರಿಯೋಜನೆ ಮತ್ತು ಪರ್ಯಾಯ ನಾವೀನ್ಯಯುತ ಹಂದರದಲ್ಲಿ ಕೆಳಗಿನ 11 ಕಾರ್ಯತಂತ್ರಗಳನ್ನು ವಿವರಿಸಿದೆ.

1. ಚಿಣ್ಣರ ಅಂಗಳ (ಲಘು ಸೇತುಬಂಧ) – (ವಸತಿ ರಹಿತ / ವಸತಿ ಸಹಿತ)
2. 12 ತಿಂಗಳ ವಸತಿ ರಹಿತ ಸೇತುಬಂಧ (NRBC)
   - ಪೂರಕ ಶಾಲೆ
   - ಸಾರಿಗೆ ಸೌಲಭ್ಯ
   - 12 ತಿಂಗಳ ವಸತಿ ರಹಿತ ಸೇತುಬಂಧ
3. ಮದರಸ ಮತ್ತು ಸಂಸ್ಕೃತ ಶಾಲೆಗಳು
4. 12 ತಿಂಗಳ ವಸತಿಯುತ ಸೇತುಬಂಧ (RBC)
   - [redacted]
   - 12 ತಿಂಗಳ ವಸತಿಯುತ ಸೇತುಬಂಧ
5. ಋತುಮಾನ ವಸತಿಯುತ ಸೇತುಬಂಧ
6. ಸಂಚಾರಿ ಶಾಲೆ
7. ಟೆಂಟ್ ಶಾಲೆಗಳು
8. ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ (NCLP)
9. ವಿಶೇಷ ದಾಖಲಾತಿ ಆಂದೋಲನ
10. ಗೃಹ ಆಧಾರಿತ ಶಿಕ್ಷಣ
11. ಚೈತ್ರದ ಚಿಗುರು

**Out of School Children of age group 7 - 14 (In Laksh)**

*




* * * * *